೨. ವಿಟ್ಲದಲ್ಲಿ ಉಪ ಖಜಾನೆ ಮಂಜೂರು ಮಾಡುವುದು.

ಶ್ರೀ ಎ. ರಂಕ್ಯಯ್ಯ ಪೂಜಾರಿ (ವಿಟ್ಲ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲವು ವಿಧಾನ ಸಭಾಕ್ಷೇತ್ರದ ಕೇಂದ್ರವೂ ಪುತ್ತೂರು ಆಸುಪಾಸಿನ ಸುಮಾರು ಹತ್ತು ಮಂಡಲ ಪಂಚಾಯತಿಗಳ ಸಮೀಪದ ಅನುಕೂಲಕರವಾದ ಕೇಂದ್ರವೂ ಆಗಿದ್ದು ವಿಟ್ಲಕ್ಕೆ ಉಪಖಜಾನೆಯೊಂದರ ಅವಶ್ಯಕತೆಯನ್ನು ಮನಗಂಡು ಆ ಒಗ್ಗೆ ವಿಟ್ಲ ಮಂಡಲ ಪಂಚಾಯತಿನ ಸಭೆಯಾ ನಿರ್ಣಯವಮಾಡಿ ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಆನಂತರ ಇಲಾಖಾವತಿಯಿಂದ ಸ್ಥಳ ತನಿಖೆ ಆಗಿದ್ದರೂ ಇವತ್ತಿನವರೆಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಉಪಖಜಾನೆ ಕಲಸಕ್ಕೆ ವಿಟ್ಲ ಫಿರ್ಕಾ ಮತ್ತು ಆಸುಪಾಸಿನ ಜನರು ಬಿ ಸಿ, ರೋಡಿಗೆ ಹೋಗಬೇಕಾಗಿರುವುದರಿಂದ ವಿಟ್ಲದಲ್ಲಿ ಉಪಖಜಾನೆಯಾದಲ್ಲಿ ಸುಲಭವಾಗಿಯೂ ಮತ್ತು ಶೀಘ್ರವಾಗಿಯೂ ಕೆಲಸ ನಡೆಯಲು ಅನುಕೂಲಕರ. ಆದ್ದರಿಂದ ವಿಟ್ಲದಲ್ಲಿ ಅತೀಶೀಘ್ರವಾಗಿ ಉಪಖಜಾನೆಯನ್ನು ಮಂಜೂರು ಮಾಡಬೇಕಾಗಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಆರ್ಥಮಂತ್ರಿಗಳ ಗಮನಕ್ಕೆ ವಿಚಾರವನ್ನು ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ತಿರಿಸಿಕೊಡುತ್ತೇನೆ.

2. Implementation of Circular Railway Project for Bangalore City.

SRI PERIKAL M. MALLAPPA (Chickpet).—Mr. Speaker Sir, In order to solve the traffic problem of this growing city of Bangalore A circular Railway Project (Rapid Transit Project) was prepared and sent to the Government of India for clearance. It was learnt that Railway Ministry had approved the project and sent to the Planning Commission for making suitable allocations. If the allocations are made, the Railways are willing to implement the project. There is a move to Shelve this Project. I therefore request the Government to take up the above Project with the Planning Commission and the Government of India so that the traffic problem of this city could be solved. I request the Hon'ble Chief Minister to take action in this regard.

ಶ್ರೀ ಬಿ. ಶಿವಣ್ಣ (ಸಮಾಜಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಉತ್ತರ ಒದಗಿಸುತ್ತೇನೆ.

೪. ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ರೋಗಿಗಳಿಗೆ ಔಷಧಿಗಳ ಕೊರತೆಯನ್ನು ನೀಗಿಸುವುದು.

ಶ್ರೀ ಕೆ. ಹರ್ಷ ಕುಮಾರ್‌ಗೌಡ (ಚಾಮರಾಜ).—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಪ್ರತಿಷ್ಠಿತ ಆಸ್ಪತ್ರೆಯಾದ ಕೃಷ್ಣರಾಜೇಂದ್ರ ಆಸ್ಪತ್ರೆ ಇಂದು ಸಂಪೂರ್ಣವಾಗಿ ದುಸ್ಥಿತಿಯಲ್ಲಿದೆ. ರೋಗಿಗಳಿಗೆ ಅತ್ಯಾವಶ್ಯಕವಾಗಿ ಬೇಕಾಗಿದ್ದ (೧) ಡಯಲಿಸಿಸ್ ಇದ್ದರೂ ಕೂಡ ಅದು ಕಾರ್ಯನಿರ್ವಹಿಸುತ್ತಿಲ್ಲ. (೨) ೮ ಲಕ್ಷ ಪ್ರಜಾಸಂಖ್ಯೆಯ ನಗರಕ್ಕೆ ಒಂದೇ ಒಂದು ಇ.ಸಿ.ಜಿ. ಕಾರ್ಯನಿರ್ವಹಿಸುತ್ತಿದ್ದು ಅದು ಸರಿಯಾದ ಮಾಹಿತಿ ನೀಡಲು ಒತ್ತಡದ ಹೆಚ್ಚಳದಿಂದ ಸಾಧ್ಯವಾಗುತ್ತಿಲ್ಲ. (೩) ಪ್ರತಿ ಜೀವ ರಕ್ಷಕ ಔಷಧಿಗಳ ಕೊರತೆಯಿಂದ ರೋಗಿಗಳ ಸಂಕಷ್ಟ ಹೇಳತೀರದಾಗಿದೆ. (೪) ಎಕ್ಸ್-ರೇ ಫಿಲಂಗಳ ತೀವ್ರ ಅಭಾವದಿಂದ ಜನ ಪರದಾಡುವಂತಾಗಿದೆ. (೫) ಇಂಟ್ರಾ ವೀನಸ್ ಗ್ಲೂಕೋಸ್ ತಯಾರಿಕಾ ಘಟಕದ ಸ್ಥಗಿತದಿಂದ ನಾಲ್ಕು ರೂಪಾಯಿಗೆ ಒಂದು ಬಾಟ್ಲಿ ಸಿಗುತ್ತಿದ್ದುದು ಇವತ್ತು ಮಾರುಕಟ್ಟೆಯಲ್ಲಿ ೧೬ ರೂಪಾಯಿಗಳನ್ನು ಕೊಟ್ಟು ಜನ ಖರೀದಿಸುವಂತಹ ಹೀನಸ್ಥಿತಿಯಾಗಿದೆ. ಇದನ್ನು ಸಂಬಂಧಪಟ್ಟ ಆರೋಗ್ಯ ಸಚಿವರು ಮತ್ತು ಸರ್ಕಾರ ಬಗೆಹರಿಸಿ ಸೂಕ್ತ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀಮತಿ ಮಾನೋಮಣಿ ಪಂಢರಾಜ್ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸುತ್ತೇನೆ.